# ಪಂಡೋರಳ ಪೆಟ್ಟಿಗೆ

ಹೆಣ್ಣು, ಹೆಣ್ಣಿನ ಹುಟ್ಟು, ಎರಡನೇ ಪ್ರಜೆಯಾಗಿ ಅವಳು ಅನುಭವಿಸಿದ ಸಂಕಟಗಳ ಕಥನಗಳು ಆಳವಾಗಿ ನೆಲದಾಳವನ್ನು ಬಗೆದಷ್ಟು ಹೊಮ್ಮುತ್ತಲೇ ಇರುತ್ತವೆ. ಹೆಣ್ಣಿನ ಚರಿತ್ರೆಯನ್ನು ರೂಪಿಸುವುದೆಂದರೆ ಅವಳು ಎಲ್ಲೆಲ್ಲಿ ಮರೆಯಾಗಿದ್ದಳೋ ಅಲ್ಲಿಂದ ಹೆಕ್ಕಿ ತೆರೆಯುವುದೇ ಆಗಿದೆ.

ದೇವ ದಾನವರ ಸಂಘರ್ಷದ ಕತೆ ಎಲ್ಲಾ ನಾಗರಿಕತೆಯಲ್ಲೂ ಇದೆ. ದೇವತೆಗಳು ನೆಲೆಸಿರುವುದು ಸ್ವರ್ಗದಲ್ಲಾದರೆ, ಅವರ ಸೃಷ್ಟಿಯೆನ್ನಲಾದ ಮಾನವ ಭೂಭಾಗದಲ್ಲಿ ನೆಲೆಸಿದ. ದೇವತೆಗಳ ಜೊತೆಯಲ್ಲಿ ಅವರಷ್ಟೇ ಸಮಾನ ಬಲರಾದ ರಾಕ್ಷಸರು ಸೃಷ್ಟಿಯ ಮೂಲದಲ್ಲಿ ಸೃಷ್ಟಿಯಾಗಿ, ಅಧೋಲೋಕ ಅಥವಾ ಪಾತಾಳದಲ್ಲಿ ನೆಲೆಸಿದರು. ಸದಾಕಾಲ ಸ್ವರ್ಗದ ಅಧಿಪತ್ಯ ಉಳಿಸಿಕೊಳ್ಳಲು ಯತ್ನಿಸುವ ದೇವತೆಗಳು, ಅದನ್ನು ಕಿತ್ತುಕೊಳ್ಳಲು ಯತ್ನಿಸುವ ಅವರಷ್ಟು ಜಾಣತನವಿಲ್ಲದ ರಾಕ್ಷಸರು, ಇವರಿಬ್ಬರ ನಡುವೆ ಇಂದ್ರನ ಸ್ಥಾನಕ್ಕಾಗಿ ತಪಸ್ಸುಗೈಯುವ ಮಾನವಕುಲದ ಋಷಿಗಳ ಕತೆಗಳು ಭಾರತೀಯ ಸಂಸ್ಕೃತಿಯ ನಡೆ–ನುಡಿ ಚಿತ್ರಿಸುವ ಕಥನಗಳಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಸ್ವರ್ಗ, ಮರ್ತ್ಯಗಳ ನಡುವೆ ನಡೆದಾಡುವ ದೇವತೆಗಳಾದ ಋಷಿಗಳು ಅಪ್ಸರೆಯರ ಕಾಟಕ್ಕೆ ಸಿಲುಕಿ ತಮ್ಮ ತಪೋಶಕ್ತಿಯನ್ನು ಕಳೆದುಕೊಳ್ಳುವ ಚರಿತ್ರೆಗಳು ನಿರಂತರವಾಗಿ ಕಾಣಸಿಗುತ್ತವೆ. ಉತ್ತರ ಭಾರತದ ಹಿಮಾಲಯ, ಮಾನಸಸರೋವರದ ಕಡೆ ಪ್ರವಾಸ ಹೊರಟವರಿಗೆ ಅಲ್ಲಿನ ಸ್ಥಳೀಯರು ದೇವತೆಗಳು ಓಡಾಡುವ, ನೆಲೆಸಿದ, ಸ್ನಾನಮಾಡಿದ, ವಿವಾಹ ಮಾಡಿಕೊಂಡರೆಂದು ಗುರುತಿಸಿರುವ ದೇವಭೂಮಿ, ಶಿವಾಚಲ್ ಪ್ರದೇಶಗಳನ್ನು ತೋರಿಸುತ್ತಾರೆ. ಭಾರತೀಯ ಸಾಹಿತ್ಯದಲ್ಲಿ ದೇವಮಾನವರ ನಡುವೆ ನಿಂತು ಮಾನವಕುಲಕ್ಕೆ ಬೇಕಾದ ಸ್ವಾತಂತ್ರ್ಯ, ಸಮಾನತೆಗಾಗಿ ಹೋರಾಟ ಮಾಡಿದ ವೀರರು ಅಷ್ಟಾಗಿ ಕಂಡುಬರುವುದಿಲ್ಲ.

ಗ್ರೀಕ್ ನಾಗರಿಕತೆಯ ಕಥನಗಳಲ್ಲಿ ಮಾನವರ ಹಕ್ಕು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ವಿಶೇಷ ವ್ಯಕ್ತಿಯೆಂದರೆ ಪ್ರೊಮೀಥ್ಯೂಸ್. ಮಾನವನನ್ನು ಮಣ್ಣಿನಿಂದ ರೂಪಿಸಿದವನು ಅವನು. ಮಾನವಕುಲವನ್ನು ವಿನಾಶದ ಅಂಚಿಗೆ ತಳ್ಳಲೆಂದೇ ದೇವಲೋಕದ ಶಿಲ್ಪಿಯಾದ ಸ್ಯೂಸ್ ತನ್ನ ಮಗ ಹೆಫೀಸ್ಟಸನನ್ನು ಕರೆದು ಅತ್ಯಂತ ಸುಂದರಿಯಾದ ಹೆಣ್ಣಿನ ಮೂರ್ತಿಯೊಂದನ್ನು ಸೃಷ್ಟಿಸಲು ಹೇಳಿದ. ಎಲ್ಲಾ ದೇವತೆಗಳು ಸೇರಿ ಅದೊಂದು ವಿನಾಶಕ್ಕೆ ಹುಟ್ಟಿದ ಪುತ್ಥಳಿಯೆಂಬಂತೆ ಜೀವ–ಭಾವ ತುಂಬಿ ಅಲಂಕರಿಸುತ್ತಾರೆ. ಹರ್ಮಿಸ್ ಅವಳ ಹೃದಯದಲ್ಲಿ ವಂಚನೆಯನ್ನು, ತುಟಿಗಳಲ್ಲಿ ಸುಳ್ಳನ್ನು, ನಾಲಿಗೆಯಲ್ಲಿ ಜೇನ ಸವಿಯನ್ನು ತುಂಬುತ್ತಾನೆ. ಸೌಂದರ್ಯದ ದೇವತೆ ಅಫ್ರೊಡೈಟ ಲಾವಣ್ಯವನ್ನು ಕೊಟ್ಟರೆ, ಅಥೀನ ಹೆಣ್ಣಿಗೆ ವಿಶೇಷವಾಗಿ ಲಭಿಸಿರುವ ಜಾಣ್ಮೆಯನ್ನು ಕೊಡುತ್ತಾಳೆ. ಕೊನೆಯಲ್ಲಿ ಸ್ಯೂಸ್ ತನ್ನ ಉದ್ದೇಶವನ್ನು ಈಡೇರಿಸಲು ಹುಟ್ಟಿದ ಅವಳಿಗೆ ಅವಿಧೇಯತೆ, ಅವಿವೇಕವನ್ನು ಅಡಗಿಸಿ ಒಂದು ಸುಂದರವಾದ ಪೆಟ್ಟಿಗೆಯಲ್ಲಿರಿಸಿ ವಿಶೇಷ ಕೊಡುಗೆಯಾಗಿ ನೀಡಿದ. ಅದರ ಜೊತೆ ಇನ್ನೂ ಏನೇನನ್ನು ಇರಿಸಿದ ಎಂಬುದನ್ನು ರಹಸ್ಯವಾಗಿರಿಸಿದ. ಅವಳ ಸೃಷ್ಟಿಯ ಉದ್ದೇಶ ನೆರವೇರಲೆಂದು ಎಲ್ಲಾ ದೇವತೆಗಳು ಹರಸಿದರು. ವಿನಾಶವನ್ನು ಒಡಲಲ್ಲಿ ಇಟ್ಟುಕೊಂಡು ಪೆಟ್ಟಿಗೆಯೊಂದಿಗೆ ಹುಟ್ಟಿದ ಇವಳನ್ನು ಪಂಡೋರ ಎಂದೇ ಕರೆಯಲಾಯಿತು. ದ್ವೇಷ, ಅಸೂಯೆ, ಒಳಸಂಚುಗಳಿಂದ ಕೂಡಿದ ಮಾನವರೆಂದರೆ ದೇವಲೋಕದ ಅಧಿಪತಿಯಾದ ಸ್ಯೂಸ್ ದೇವನಿಗೆ ಆಗದ ವಿಷಯ.

ಮುಂದೆ ಹರ್ಮಿಸನು ಅವಳನ್ನು ಕರೆದುಕೊಂಡು ಬಂದು ಪ್ರೊಮೀಥ್ಯೂಸನ ತಮ್ಮನಾದ ಎಪಿಮೀಥ್ಯೂಸನಿಗೆ ಸ್ಯೂಸ್ ದೇವನ ಕೊಡುಗೆಯೆಂದು ನೀಡುತ್ತಾನೆ. ಮಂದಬುದ್ಧಿಯವನಾದ ಅವನು ಸ್ವೀಕರಿಸಲೆಂದು ಕೈಚಾಚಿದಾಗ ಪ್ರೊಮೀಥ್ಯೂಸ್ ಅವಳನ್ನು ಹಿಂದಕ್ಕೆ ಕಳಿಸುವಂತೆ ತಿಳಿಹೇಳುತ್ತಾನೆ. ಇದರಿಂದ ಸಿಟ್ಟಿಗೆದ್ದ ಸ್ಯೂಸ್, ಪ್ರೊಮೀಥ್ಯೂಸ್‌ನನ್ನು ಬಂಧಿಸಿ ಕಾಕಸಸ್ ಪರ್ವತದಲ್ಲಿ ಕೋಡುಗಲ್ಲೊಂದಕ್ಕೆ ಸರಪಳಿಯಿಂದ ಕಟ್ಟುವ ಶಿಕ್ಷೆ ನೀಡುತ್ತಾನೆ.

ಸೋಲನ್ನೊಪ್ಪಿಕೊಳ್ಳದ ಸ್ಯೂಸ್ ಮತ್ತೊಮ್ಮೆ ಪಂಡೋರಾಳನ್ನು ಎಪಿಮೀಥ್ಯೂಸನ ಬಳಿಗೆ ಕಳಿಸುತ್ತಾನೆ. ಅವಳ ಕಡೆಗೆ ಆಕರ್ಷಿತನಾಗಿದ್ದ, ಸ್ಯೂಸ್ ಬಗ್ಗೆ ಒಳಗೊಳಗೇ ಅಂಜಿಕೊಂಡಿದ್ದ ಅವನು ಅವಳನ್ನು ಸ್ವೀಕರಿಸಿ ಮದುವೆಯಾಗುತ್ತಾನೆ. ಪ್ರಮೀಥ್ಯೂಸ್ ಮಾತ್ರ ಯಾವುದೇ ಕಾರಣಕ್ಕೂ ಪಂಡೋರಾ ಜೊತೆ ಬಂದಿದ್ದ ಪೆಟ್ಟಿಗೆಯನ್ನು ತೆಗೆಯಬಾರದೆಂದೇ ಹೇಳಿದ್ದ. ಒಂದು ದಿನ ಅದುಮಿಟ್ಟ ಆಸೆ ತಡೆಯಲಾರದೆ ಪಂಡೋರಾ, ಗಂಡನಿಗೆ ತಿಳಿಯದಂತೆ ಪೆಟ್ಟಿಗೆ ತೆರೆದುಬಿಡುತ್ತಾಳೆ. ಅದನ್ನು ತಡೆಯಲೆಂದು ಬಂದ ಅವಳ ಗಂಡನ ಹಾಗೂ ಅವಳ ಮೈಮನಗಳನ್ನು ಅದರಲ್ಲಿ ಅದುಮಿಟ್ಟಿದ್ದ ಪತನದ ಕಡೆಗೆ ಕೊಂಡೊಯ್ಯುವ ರಾಗದ್ವೇಷಗಳು, ರೋಗರುಜಿನಗಳು, ಎಲ್ಲಾ ತರಹದ ಅನಿಷ್ಟ ಕೀಟಗಳು ಪ್ರವೇಶಿಸುತ್ತವೆ. ಅದುವರೆಗೆ ದೇವತೆಗಳಂತೆ ಮುಪ್ಪು, ರೋಗರುಜಿನಗಳು, ಸಾವು ಇಲ್ಲದೆ ಬದುಕುತ್ತಿದ್ದ ಮಾನವರು ಬಾಧಿತಲೋಕದ ಪ್ರಜೆಗಳಾಗುತ್ತಾರೆ.

ಇನ್ನೊಂದು ದಂತಕಥೆ ಹೇಳುವಂತೆ ಪಂಡೋರಾ ಗಂಡನ ಮನೆಗೆ ಬರುವುದಕ್ಕಿಂತ ಮುಂಚೆಯೇ ಈ ಪೆಟ್ಟಿಗೆ ಇದ್ದು, ಅದನ್ನು ತೆಗೆಯದಂತೆ ಎಲ್ಲರೂ ಜಾಗ್ರತೆ ವಹಿಸಿದ್ದರು. ಪಂಡೋರಾ ಕುತೂಹಲದಿಂದ ಯಾರೂ ಇಲ್ಲದ ವೇಳೆಯಲ್ಲಿ ಆ ಪೆಟ್ಟಿಗೆ ತೆಗೆದಾಗ ರೋಗರುಜಿನಗಳನ್ನು ಹರಡುವ ಕೀಟಗಳು ಮಾನವಲೋಕವನ್ನು ವೇಗವಾಗಿ ಹರಡಿಕೊಳ್ಳುತ್ತವೆ. ಹೆಣ್ಣಿನ ಅಪರಿಮಿತ ಕುತೂಹಲ, ಆಸೆಯನ್ನು ಕುರಿತಂತೆ ಮಿಲ್ಟನ್ ಬರೆದ 'ಪ್ಯಾರಡೈಸ್ ಲಾಸ್ಟ್' ಕಾವ್ಯದಲ್ಲಿ ಜಗತ್ತಿನ ಮೊದಲ ಹೆಣ್ಣು ದೇವರು ನಿಷೇಧಿಸಿದ ದಿವ್ಯವಾದ ಮರದ ಹಣ್ಣನ್ನು ತಾನು ತಿಂದರೆ ಏನಾಗುತ್ತದೋ ಎಂದು ಹೆದರಿ ತನ್ನ ಗಂಡನಿಗೆ ತಿನ್ನಿಸಿ, ಆಗುವ ಪರಿಣಾಮ ನೋಡಬಯಸಿದಳು ಎಂಬ ಅಪವಾದನೆಯನ್ನು ಹೊತ್ತುಕೊಳ್ಳುತ್ತಾಳೆ. ಪಂಡೋರಾ ಪೆಟ್ಟಿಗೆಯ ಕಥೆ ಹಾಗೂ ನಿಷೇಧಿತ ಹಣ್ಣನ್ನು ತಿನ್ನಬಯಸಿದ ಹೆಣ್ಣಿನ ಕಥೆ ಹೆಚ್ಚು ಕಡಿಮೆ ಒಂದೆಯೇ. ಎರಡೂ ಹೆಣ್ಣು ದುರಾಸೆಯುಳ್ಳವಳು, ಸ್ವಾರ್ಥಿ ಎಂಬ ಕಥೆಗಳೇ. ಇವು ಹೆಣ್ಣು ಎಲ್ಲ ಪತನಗಳ ಮೂಲ ಎಂಬ ಪುರುಷನಿರ್ಮಿತ ಅಪಾದನೆಯನ್ನು ಹೇಳುತ್ತಲೇ ಎಲ್ಲ ದುರಂತಗಳ ಮೂಲವಾದ ಹೆಣ್ಣನ್ನು ತ್ಯಜಿಸು ಎಂಬ ಮನುವಿನ ಮಾತಿಗೆ ಸಮರ್ಥನೆ ಆಗಿವೆ.

ಪಂಡೋರಾ ಪೆಟ್ಟಿಗೆ ಎಂಬುದು ಎಲ್ಲ ಕಾಲಕ್ಕೂ ಮುಚ್ಚಿಡಲೇಬೇಕಾದ ಕಂಟಕಗಳ ರಹಸ್ಯ ತಾಣವಾಗಿದ್ದು, ಅದನ್ನು ತೆರೆದರೆ ದುರಂತ ಕಟ್ಟಿಟ್ಟ ಬುತ್ತಿ ಎಂಬ ಸತ್ಯವನ್ನು ಹೇಳಲಾಗಿದೆ. ಕರೋನ ವೈರಸ್ ತನ್ನ ಎರಡನೇ ಘಟ್ಟದ ದಾಳಿಯನ್ನು ಆರಂಭಿಸಲು ಸಿದ್ಧವಾಗಿರುವ ಸದ್ಯದ ಪರಿಸ್ಥಿತಿಯಲ್ಲಿ ಈ ಪಂಡೋರ ಪೆಟ್ಟಿಗೆಯನ್ನು ಯಾರು, ಯಾವಾಗ, ಎಲ್ಲೆಲ್ಲಿ ತೆಗೆದರು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಈ ಪಂಡೋರ ಪೆಟ್ಟಿಗೆ ಯಾವ, ಯಾವ ರೀತಿಯ ಕೀಟಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆ ಎಂಬುದೂ ಯಕ್ಷಪ್ರಶ್ನೆಯಾಗಿದೆ.

■ **ಅಮೃತಮತಿ**

## ಮಾತೇ ಮುತ್ತು

- ಧನವಿದ್ದವರೇ ಧನಿಕರಲ್ಲ, ಜ್ಞಾನವೇ ಧನದ ನಿಧಿ.

  —ಪಂಡಿತ ತಾರಾನಾಥ

- ಬಂಧಿತನಾದ ದೇವರೇ ಮನುಷ್ಯ; ಬಂಧನದಿಂದ ಬಿಡಿಸಿಕೊಂಡ ಮನುಷ್ಯನೇ ದೇವರು.

  —ರಾಮಕೃಷ್ಣ ಪರಮಹಂಸ

- ನೀವು ಜೀವಂತ ಇರುವಾಗಲೇ ನಿಮ್ಮ ಕೈಯಿಗಳಿಗೆ ಕಟ್ಟಿದ ಕಟ್ಟುಗಳನ್ನು ಬಿಚ್ಚಿಕೊಳ್ಳದಿದ್ದರೆ, ಸತ್ತ ಬಳಿಕ ಪ್ರೇತಗಳು ಬಂದು ಅವನ್ನು ಬಿಚ್ಚುತ್ತವೆಯೇ?

  —ಕಬೀರ

- ವಿವೇಕಿಯಾದವನು ಬೇರೆಯವರ ತಪ್ಪನ್ನು ಕಂಡು ತನ್ನಲ್ಲಿರುವ ತಪ್ಪನ್ನು ತಿದ್ದಿಕೊಳ್ಳುತ್ತಾನೆ.

  —ಸ್ವಾಮಿ ವಿವೇಕಾನಂದ

- ನಮ್ಮ ಒಳ್ಳೆಯ ಕೆಲಸಗಳಿಗಿಂತ ನಾವು ಮಾಡಿದ ಅಪರಾಧಗಳೇ ಹೆಚ್ಚು ಕಾಲ ನೆನಪಿನಲ್ಲಿ ಉಳಿಯುತ್ತವೆ.

  —ಡೆಮಾಕ್ರಿಟಸ್